ಸಹಕಾರ ಸಂಘ ಸಿಬ್ಬಂದಿಗಳ ವೇಚ್ಚ.

1550 (2199) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಹಕಾರ ಸಂಘಗಳ ಕಾಯಿದೆ ಹಾಗೂ ನಿಯಮದಲ್ಲಿ ನೌಕರರ ಸಿಬ್ಬಂದಿ ವೇಚ್ಚವು ದುಡಿಯುವ ಬಂಡವಾಳದ ಶೇ. 2.50 ಮೀರಬಾರದೆಂದು ಉಲ್ಲೇಖಿತವಿರುತ್ತದೆಯೇ?

ಆ) ಹಾಗಿದ್ದಲ್ಲಿ, ಇದು ಲ್ಯಾಂಪ್ಸ್ ಸಹಕಾರಿ ಸಂಘಕ್ಕೆ ಅನ್ವಯಿಸುತ್ತದೆಯೇ?

ಇ) ವೇತನ ಶ್ರೇಣಿ ಮಂಜೂರು ಮಾಡಲು ಮಾನದಂಡವೇನು?

ಈ) ಲ್ಯಾಂಪ್ಸ್ ಸಹಕಾರ ಸಂಘ ಹಾಗೂ ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಇರುವ ಸಹಕಾರ ಸಂಘ ಸರ್ಕಾರದ ಮಟ್ಟದಲ್ಲಿ ಮಂಜೂರಾತಿ ಪಡೆಯಲು ಸಾಧ್ಯವೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಇಲ್ಲ.

ಆದರೆ ಸಿಬ್ಬಂದಿ ವೇಚ್ಚವು ಸಂಘದ ಹಿಂದಿನ ಮೂರು ಸಾಲುಗಳ ಸರಾಸರಿ ವಾರ್ಷಿಕ ವಹಿವಾಟಿನ ಶೇ. 2.50 ಗಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕೆಂದು ಸಂಘಗಳ ಆರ್ಥಿಕ ಹಿತದೃಷ್ಟಿಯಿಂದ ಸೂಚನೆ ನೀಡಲಾಗಿದೆ.

ಆ) ಅನ್ವಯಿಸುತ್ತದೆ.

ಇ) ಸಂಘಗಳ ಆರ್ಥಿಕ ಹಿತದೃಷ್ಟಿಯಿಂದ ಸಂಘಗಳು ಸಿಬ್ಬಂದಿ ವೇಚ್ಚವು ಒಂದು ಪರಿಗಣಿಸಬಹುದಾದ ಮಿತಿಯೊಳಗೆ ಇರಬೇಕೆಂಬ ಉದ್ದೇಶದಿಂದ ಹಾಗೂ ಸಿಬ್ಬಂದಿ ವೇಚ್ಚವು ಸಂಘದ ಆರ್ಥಿಕ ಸ್ಥಿತಿಗೆ ಪ್ರತಿಕೂಲ ಪರಿಣಾಮ ಉಂಟುಮಾಡಬಾರದೆಂಬ ದೃಷ್ಟಿಯಿಂದ ಹಾಗೂ ಅದರಿಂದ ಯಾವುದೇ ಸಂದರ್ಭದಲ್ಲಿಯೂ ಸಂಘವು ವೇಚ್ಚವನ್ನು ಅನುಭವಿಸುವಂತಾಗಬಾರದೆಂದು, ಸಿಬ್ಬಂದಿ ವೇಚ್ಚ ಹಿಂದಿನ ಮೂರು ಸಾಲುಗಳ ಸರಾಸರಿ ವಾರ್ಷಿಕ ವಹಿವಾಟಿನ ಶೇ. 2½ ಗಿಂತ ಮೀರಬಾರದೆಂದು ಇಲಾಖೆಯ ಮೂಲಕ ಸೂಚನೆ ನೀಡಲಾಗಿದೆ.

ಈ) ಹೌದು. ಸಹಕಾರ ಸಂಘಗಳ ಸಿಬ್ಬಂದಿ ವರ್ಗಕ್ಕೆ ವೇತನ ಶ್ರೇಣಿ ಮಂಜೂರು ಮಾಡುವ ವಿಷಯವು ಸರ್ಕಾರದ ವ್ಯಾಪ್ತಿಗೆ ಬರುತ್ತದೆ.